ನಿರೀಕ್ಷೆಯನ್ನು ಹುಸಿಗೊಳಿಸದೆ ಓದಿ, ಕೆಲಸವನ್ನೂ ಹುಡುಕಿಕೊಂಡು, ತಾನು ಇಷ್ಟಪಟ್ಟವನನ್ನು ಮದುವೆ ಮಾಡಿಕೊಂಡು, ಅಳಿಯನಿಗೆ ಮತ್ತೊಂದು ಕಡೆಗೆ ವರ್ಗಾವಣೆ ಆಗುವವರೆಗೆ ಗಂಡ ಹೆಂಡಿರು ಸರೋಜನ ಜೊತೆಯಲ್ಲೇ ವಾಸ್ತವ್ಯ ಹೂಡಿದ್ದರು. ತಮ್ಮ ಕೆಲಸದ ಸ್ಥಳಕ್ಕೆ ಬೈಕಿನಲ್ಲಿ ಓಡಾಡುತ್ತಿದ್ದರು. ಮಗಳು ಬಸುರಿಯಾದಳು ಎಂದು ಸರೋಜ ಸಂಭ್ರಮಿಸುತ್ತಿರುವಾಗ ಅಳಿಯನಿಗೆ ವರ್ಗಾವಣೆಯ ಆರ್ಡರು ಬಂತು. ಅವನು ಬ್ಯಾಂಕಿನಲ್ಲಿ ಆಫೀಸರ್. ಮೂರು ಮೂರು ವರ್ಷಕ್ಕೆ ವರ್ಗಾವಣೆ ಅನಿವಾರ್ಯ. ಮಗಳು ಗಂಡನನ್ನು ಅಗಲಿ ಇಲ್ಲಿ ಒಬ್ಬಂಟಿಯಾಗಿರಬೇಕಾಗುತ್ತದೆ ಎಂದು ಸರೋಜ ಅಂದುಕೊಂಡಿದ್ದರೆ ಹಾಗೇನಾಗಲಿಲ್ಲ. ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಗಂಡನನ್ನು ಹಿಂಬಾಲಿಸಿದಳು ಮಗಳು. ಬದುಕಿನಲ್ಲಿ ಪ್ರಪ್ರಥಮ ಬಾರಿಗೆ ಒಂಟಿತನದ ಭಾವನೆಯಿಂದ ಕಂಗೆಟ್ಟಳು ಸರೋಜ. ದೂರದ ಊರಿನಲ್ಲಿದ್ದ ಮಗಳೊಡನೆ ಫೋನಿನಲ್ಲಿ ಇದ್ದ ಸಂಪರ್ಕ ಒಂದೆರಡು ತಿಂಗಳಿಂದ ಸಂಪೂರ್ಣ ಎನ್ನುವಂತೆ ಕಡಿದು ಹೋಗಿದೆ. ಯಾವಾಗ ಫೋನ್ ಮಾಡಿದರೂ ಸ್ವಿಚಾಫ್. ಅಥವಾ ಕರೆಯನ್ನು ಸ್ವೀಕರಿಸುತ್ತಿಲ್ಲವೆಂಬ ಸಂದೇಶ. ಇದ್ದಕ್ಕಿದ್ದಂತೆ ಏನಾಯ್ತು ಮಗಳಿಗೆ? ಯಾಕೆ ಅಮ್ಮನನ್ನು ದೂರ ಮಾಡುತ್ತಿದ್ದಾಳೆ? ಇಲ್ಲಿದ್ದಷ್ಟು ದಿನ ಅಳಿಯನನ್ನು ಅರ್ಥ ಮಾಡಿಕೊಂಡಂತೆ ಅವನು ಒಳ್ಳೆಯವನೇ. ಹಾಗಿದ್ದರೆ ಮಗಳೇ ತನ್ನನ್ನು ದೂರೀಕರಿಸುತ್ತಿದ್ದಾಳೆಯೇ? ಯಾಕೆ? ಏನೇನೋ ದುಶ್ಚಿಂತೆಗಳು ಸರೋಜನನ್ನು ಕಂಗಾಲಾಗಿಸುತ್ತಿವೆ. ಅವಳ ನಿದ್ದೆಯನ್ನು ಕಸಿಯುತ್ತಾ ಜೀವ ಹಿಂಡುತ್ತಿವೆ. ಮಗಳ ಒಂದು ಕರೆಗಾಗಿ ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಎಂಬಂತೆ ದಿನವೂ, ಕ್ಷಣಕ್ಷಣವೂ ಕಾದು... ಕಾದು... ಸಂಕಟ ಹೇಳಿಕೊಳ್ಳಬೇಕಾದರೂ ಯಾರಲ್ಲಿ? ನಗೆಪಾಟಲಾಗಿಬಿಟ್ಟರೆ?

★★★

ಭಾಗ್ಯ ಎಲ್ಲಾ ಮಕ್ಕಳಂತೆ ತನ್ನ ಅಮ್ಮನನ್ನು ಹೃದಯಕ್ಕೆ ಹಚ್ಚಿಕೊಂಡು ಬೆಳೆದವಳಾಗಿದ್ದರೆ ಇಷ್ಟು ಯೋಚಿಸಬೇಕಾದ ಪ್ರಮೇಯ ಸರೋಜನಿಗಿರಲಿಲ್ಲ. ವಿಕ್ಷಿಪ್ತ ಮನಃಸ್ಥಿತಿಯ ಹುಡುಗಿ ಅವಳು. ಅವಳ ಮೂಗಿನ ನೇರಕ್ಕೆ ಅವಳ ವರ್ತನೆ. ಅವಳು ತಿರುಗಿ ಮಾತಾಡುವುದು ಸರೋಜನಿಗೆ ಅಭ್ಯಾಸವಾಗಿಬಿಟ್ಟಿತ್ತು. ಆದರೆ, ಅವಳ ಮನಸ್ಸಲ್ಲಿ ಏನೇನೆಲ್ಲಾ ಭಾವನೆಗಳಿವೆ ಎಂದು ಸ್ಪಷ್ಟವಾಗಿ ಅರಿವಾದ ಆ ದಿನ ಸರೋಜನಿಗೆ ಎಷ್ಟು ಆಘಾತವಾಗಿತ್ತು ಅಂದರೆ ತಾನು ಇನ್ನು ತಾಳಿಕೊಳ್ಳಲಾರೆ ಎನ್ನುವಷ್ಟು ಅವಳು ಕುಸಿದು ಹೋಗಿದ್ದಳು. ಇವತ್ತಿಗೂ ಆ ಸಂದರ್ಭ ಸ್ಪಷ್ಟವಾಗಿ ನೆನಪಿದೆ ಸರೋಜನಿಗೆ. ಎಸ್ಸೆಸ್ಸೆಲ್ಸಿ ಓದುತ್ತಿದ್ದ ಮಗಳು ತಡವಾಗಿ ಮನೆಗೆ ಬಂದಿದ್ದಳು. ತಡವಾಗಿ ಅಲ್ಲ, ರಾತ್ರಿಯಾದ ಮೇಲೆ. ಯಾರೋ ಗೆಳತಿಯ ಹುಟ್ಟಿದಹಬ್ಬವಂತೆ. ಸರೋಜ ಕೆರಳಿ ಹೋಗಿದ್ದಳು.

"ಮೊದಲೇ ಹೇಳಿ ಹೋಗೋಕೆ ಧಾಡಿ ಆಗಿತ್ತಾ?" ಕೇಳಿದ್ದಳು.

"ಮೊದಲು ಗೊತ್ತಿರ್ಲಿಲ್ಲ ನಂಗೆ. ಈಗಲಾದ್ರೂ ಅರ್ಥ ಮಾಡ್ಕೋ. ಒಂದು ಮೊಬೈಲ್ ಕೊಡ್ಸು ನಂಗೆ..."

"ಯಾಕೆ? ಮೂರು ಹೊತ್ತೂ ಮೊಬೈಲ್ ಹಿಡ್ಕೊಂಡು ಕೋಣೆ ಬಾಗಿಲು ಹಾಕ್ಕೊಂಡು ಕೂತಿರೋಕಾ? ಹಾಳಾಗಿಹೋಗ್ತಿ..."

"ನಿನ್ಹತ್ರ ಮೊಬೈಲ್ ಇತ್ತಾ?"

"ಏನೇ ಹಾಗಂದ್ರೆ?" ನಖಶಿಖಾಂತವಾಗಿ ಕಂಪಿಸುತ್ತಾ ಕೇಳಿದ್ದಳು ಸರೋಜ.

"ನಿಂಗೇ ಗೊತ್ತು. ನೀನು ಸರಿ ಇಲ್ಲ. ಅದಕ್ಕೇ..." ಮಗಳು ಮುಗುಮ್ಮಾಗಿ ಉತ್ತರಿಸಿ ಕೋಣೆ ಸೇರಿ ಬಾಗಿಲು ಮುಚ್ಚಿಕೊಂಡಿದ್ದಳು, ಆಕಾಶ ಕಳಚಿ ಬಿದ್ದಂತೆ ದಿಗ್ಭ್ರಮಿತಳಾಗಿ ನಿಂತ ಅಮ್ಮನನ್ನು ಅವಳಷ್ಟಕ್ಕೆ ಬಿಟ್ಟು...

★★★